ಬೈಪಾಸ್ ರಸ್ತೆ ನಿರ್ಮಾಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 16 : (64)

ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಉತ್ತರಿಸಬೇಕಾದ ಸಚಿವರು : ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಕೊಪ್ಪಳ ನಗರಕ್ಕೆ ಬೈಪಾಸ್ ರಸ್ತೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;	ಇಲ್ಲ.
ಆ.	ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;	ಉದ್ಭವಿಸುವುದಿಲ್ಲ.
ಇ.	ಕಲ್ಮಲ, ಕೊಪ್ಪಳ ಮತ್ತು ಶಿಗ್ಗಾಂವ್ ರಸ್ತೆಯು 3.5 ಮೀಟರ್ ಇದ್ದು, ಅದನ್ನು 7ಮೀಟರಿಗೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;	ಕಲ್ಮಲ - ಕೊಪ್ಪಳ - ಶಿಗ್ಗಾಂ ರಸ್ತೆಯು (ರಾಜ್ಯ ಹೆದ್ದಾರಿ-23) ಕಿಮೀ 0.00 ರಿಂದ 304.48 (ಓವರ್‌ಲ್ಯಾಪ 3.95 ಕಿ.ಮೀ.) ವರೆಗೆ ಒಟ್ಟು 300.53 ಕಿ.ಮೀ. ಉದ್ದವಿದ್ದು, ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ ಕಿಮೀ 144.60ರಿಂದ 203.75ರವರೆಗೆ ಅಂದರೆ 59.15ಕಿಮೀ ಉದ್ದ ಇರುತ್ತದೆ. ಸದರಿ ರಸ್ತೆ ಕಿಮೀ 0.00 ರಿಂದ 153.20 ರವರೆಗೆ ಕೇಶಿಪ್ ವತಿಯಿಂದ 7.00 ಮೀಟರ್ ಅಗಲಕ್ಕೆ ಅಭಿವೃದ್ಧಿಪಡಿಸಲಾಗಿದೆ. ಬಾಕಿ ಉಳಿದ ಕಿಮೀ 153.20ರಿಂದ 203.75 ರವರೆಗೆ (ಕೊಪ್ಪಳ ತಾಲ್ಲೂಕು ವ್ಯಾಪ್ತಿ) ಅಂದರೆ 50.55 ಕಿಮೀ ಉದ್ದದ ರಸ್ತೆಯ ಅಗಲವನ್ನು ದಟ್ಟ ವಾಹನ ಸಂಚಾರವಿರುವ ಪಯುಕ್ತ 3.75ಮೀಟರ್‌ನಿಂದ 7.00 ಮೀಟರ್‌ವರೆಗೆ ವಿಸ್ತರಿಸುವ ಅವಶ್ಯಕತೆ ಇದೆ.
ಈ.	ಹಾಗಿದ್ದಲ್ಲಿ, ಎಂದಿನಿಂದ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;	ಉದ್ಭವಿಸುವುದಿಲ್ಲ.

ಉ.	ಕೊಪ್ಪಳ ತಾಲ್ಲೂಕಿನಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹೇರಳವಾಗಿರುವುದು ಅತಿ ಹೆಚ್ಚು ಸರಕು ಸಾಗಾಣಿಕೆ ಲಾರಿಗಳಿಂದ ರಸ್ತೆ ಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಊ.	ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರಗಳನ್ನು ನೀಡುವುದು)	1. ಕಲ್ಮಲ-ಶಿಗ್ಗಾಂವ್ ರಾಜ್ಯ ಹೆದ್ದಾರಿ-23 ಹಾಗೂ ಕೊಪ್ಪಳ ಕ್ಯಾದಿಗುಪ್ಪಾ ರಾಜ್ಯ ಹೆದ್ದಾರಿ-36 ರಸ್ತೆಗಳು ಕೆಆರ್‌ಡಿಸಿಎಲ್ ಮೂರು ವರ್ಷಗಳ ನಿರ್ವಹಣೆ ಪ್ಯಾಕೇಜ್ ಅಡಿಯಲ್ಲಿ ಸೇರ್ಪಡೆಯಾಗಿರುತ್ತವೆ. ಸದರಿ ರಸ್ತೆಗಳ ಮೇಲೆ ಕಾಮಗಾರಿ ಪೂರ್ಣಗೊಂಡಿದ್ದು, ಜನವರಿ 2009ರವರೆಗೆ ನಿರ್ವಹಣೆ ಕಾಮಗಾರಿಯನ್ನು ಗುತ್ತಿಗೆದಾರರು ನಿರ್ವಹಿಸುತ್ತಿದ್ದಾರೆ. 2. ಗಿಣಿಗೇರಾ - ಗೊಂಡಬಾಳ ಜಿಲ್ಲಾ ಮುಖ್ಯ ರಸ್ತೆಯನ್ನು ಲೆಕ್ಕ ಶೀರ್ಷಿಕೆ 3054 (ಯೋಜನೆ) ಹಾಗೂ 5054 ಡಾ|| ನಂಜುಂಡಪ್ಪ ಸಮಿತಿ ವರದಿ ಯೋಜನೆ ಅಡಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ಕೈಗೊಳ್ಳಲಾಗಿದೆ. 3. ದದೇಗಲ್ - ಹಿರೇಸಿಂದೋಗಿ ಜಿಲ್ಲಾ ಮುಖ್ಯ ರಸ್ತೆಯನ್ನು ಲೆಕ್ಕ ಶೀರ್ಷಿಕೆ 3054 (ಯೋಜನೆ) ಅಡಿಯಲ್ಲಿ ಕಿಮೀ 3.00 ರಿಂದ 7.03 ರವರೆಗೆ ಡಾಂಬರೀಕರಣ ಮಾಡಲಾಗಿದೆ. ಬಾಕಿ ಉಳಿದ ರಸ್ತೆಯನ್ನು ಅಭಿವೃದ್ಧಿಪಡಿಸಲು ಗುತ್ತಿಗೆ ನಿಯಮಿಸಿ ಡಾಂಬರೀಕರಣ :ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಅತ್ಯಂತ ಅನುಭವವುಳ್ಳ, ದಕ್ಷ ಆಡಳಿತ ಮಾಡುವ ಹಿರಿಯ ಮಂತ್ರಿಗಳು ಇದ್ದಾರೆ. ಹಳ್ಳಿಯಲ್ಲಿ ಹೇಳುವ ಗಾದೆಯಂತೆ 'ಗುಡ್ಡಕ್ಕೆ ಕಲ್ಲು ಹೊತ್ತ ಹಾಗೆ' ಆಗಿದೆ. ಪ್ರಶ್ನೆ ಕೇಳಿ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡ ಹಾಗಾಗಿದೆ. ನಾನು ಕೇಳಿದ ಮೊದಲನೆ ಪ್ರಶ್ನೆಗೆ "ಇಲ್ಲ" ಎಂದು ಉತ್ತರಿಸಿದ್ದಾರೆ. ನಾನು ಕೇಳಿದ ಎರಡನೆ ಪ್ರಶ್ನೆಗೆ "ಉದ್ಭವಿಸುವುದಿಲ್ಲ" ಎಂದು ಉತ್ತರಿಸಿದ್ದಾರೆ. ನಮ್ಮ ಭಾಗದವರಾಗಿದ್ದು ಅವರಿಗೂ ಇದು ಗೊತ್ತಿದೆ. ಕೊಪ್ಪಳ ನಗರದಲ್ಲಿ ಮೈನ್ಸ್ ಲಾರಿ ಹೋಗುತ್ತದೆ. Highway 63 ಏನಿದೆ, ಅದು specification ಪ್ರಕಾರ ನಗರದಲ್ಲಿ widening ಇಲ್ಲ. ಆಮೇಲೆ, ರಾತ್ರಿ 9 ಗಂಟೆ ನಂತರ ಯಾರೂ ಆ ರಸ್ತೆಯಲ್ಲಿ ಓಡಾಡಲಿಕ್ಕಾಗುವುದಿಲ್ಲ. ಅನೇಕ ಸಾರಿ ಅಲ್ಲಿ ಅಪಘಾತಗಳು ಸಂಭವಿಸಿವೆ. ನಗರದಲ್ಲಿ ಪರಿಸರ ಕೂಡ ಹಾಳಾಗುತ್ತಿದೆ. ಇದರಿಂದ ಆರೋಗ್ಯದ ಮೆಲೆ ದುಷ್ಪರಿಣಾಮವಾಗುತ್ತಿದೆ. ನಗರದ ಮಧ್ಯದಲ್ಲಿ ಆ ರಸ್ತೆಯಿರುವುದರಿಂದ ಜನರು ಇಷ್ಟು ತೊಂದರೆಯಲ್ಲಿರುವಾಗ, ಇಂಥ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದರೆ ನಾವು ಯಾರನ್ನು ಕೇಳಬೇಕು?

ಶ್ರೀ ಸಿ. ಎಂ. ಉದಾಸಿ : ಮಾನ್ಯ ಸದಸ್ಯರ ಕಳಕಳಿ ನನಗರ್ಥವಾಗುತ್ತಿದೆ. ಅಂಕೋಲಾ-ಗುತ್ತಿ roadನಲ್ಲಿ ವಾಹನ ಸಂಚಾರದ ದಟ್ಟಣೆಯಿರುವುದರಿಂದ ಈ ಮಧ್ಯದಲ್ಲಿ ಬರಬೇಕಾದಂಥ ರಸ್ತೆಯಲ್ಲಿ ಬಹಳಷ್ಟು ವಾಹನಗಳ ದಟ್ಟಣೆಯಿರುವುದರಿಂದ ತಮ್ಮ ಊರಿನ ಹೊರಗಡೆ ಒಂದು ring road ಬೇಕೆನ್ನುವ ಬೇಡಿಕೆಯಿದೆ. ನನಗನಿಸುತ್ತದೆ, ಅಂಕೋಲಾ-ಗುತ್ತಿ roadನಲ್ಲಿ ಕೇವಲ ಕೊಪ್ಪಳ ಒಂದೇ ಅಲ್ಲ, ಕೊಪ್ಪಳ, ಗದಗ, ಹುಬ್ಬಳ್ಳಿ - ಧಾರವಾಡ ಸಹಿತ ಈ ring roadನ ಅವಶ್ಯಕತೆ ಇದೆಯೆಂದು ನಮ್ಮೆಲ್ಲರ ಗಮನಕ್ಕೂ ಬಂದಿದೆ. ಅದಕ್ಕೆ ನಾನು ಹೇಳುತ್ತಿರುವುದಿಷ್ಟೆ, ಇದನ್ನು ಗಂಭೀರವಾಗಿ ಪರಿಗಣಿಸಿ ಮಾಡಬೇಕಾಗಿದ್ದರಿಂದ, ಹಣಕಾಸಿನ ಲಭ್ಯತೆಯ ಮೇಲೆ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ : ರಸ್ತೆ ಮಾಡುವುದಕ್ಕಾಗುವುದಿಲ್ಲವೆನ್ನುವುದನ್ನು ಒಪ್ಪಿಕೊಳ್ಳೋಣ. ಆದರೆ, ಲಾರಿ ಹೋಗುವುದನ್ನಾದರೂ ನಿಲ್ಲಿಸುವುದಕ್ಕಾಗುತ್ತದೆಯೇ? ಲಾರಿಯನ್ನಾದರೂ ನಿಲ್ಲಿಸಿಬಿಡಿ.

ಅಧ್ಯಕ್ಷರು : ನೀವಿದ್ದಾಗಲಾದರೂ ಮಾಡಬಹುದಾಗಿತ್ತಲ್ಲ?

ಶ್ರೀ ಹೆಚ್. ಡಿ. ರೇವಣ್ಣ : ರಸ್ತೆ ಮಾಡಿದ ನಂತರ ಬೇಕಾದರೆ ಲಾರಿ ಬಿಡುವುದಕ್ಕಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಮಾಡಿಕೊಡುತ್ತೇವೆಂದು ಹೇಳಿರುವುದರಿಂದ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದು ಶೀಘ್ರದಲ್ಲಿ ಅದು ಪ್ರಾರಂಭವಾಗಬೇಕು. ಎರಡನೇ ಪ್ರಶ್ನೆ ಏನೆಂದರೆ, ಕಲ್ಮಲ-ಕೊಪ್ಪಳ - ಶಿಗ್ಗಾಂವ ರಸ್ತೆ 3.5ಮೀಟರ್ ಇದ್ದದ್ದನ್ನು 7ಮೀಟರ್‌ಗೆ ವಿಸ್ತರಿಸುವ ಕುರಿತು ಪ್ರಶ್ನೆಯನ್ನು ನಾನು ಕೇಳಿದ್ದೆ. ಅವರು ಅದಕ್ಕೂ ಕೂಡ ಉತ್ತರ ಕೊಟ್ಟಿದ್ದಾರೆ. 'ಅದನ್ನು ವಿಸ್ತರಿಸುವ ಅವಶ್ಯಕತೆ ಇದೆ' ಎನ್ನುವ ಮಾತನ್ನು ಹೇಳಿದ್ದಾರೆ. ಹಾಗಾಗಿ, ಮಾನ್ಯ ಮಂತ್ರಿಗಳು ಅದನ್ನು ಈ

ವರ್ಷ ರಾಜ್ಯ ಹೆದ್ದಾರಿ - 23ಯನ್ನು ಈ ವರ್ಷವಾದರೂ ಕೆಲಸ ಪ್ರಾರಂಭ ಮಾಡುತ್ತೀರೋ? ಅಥವಾ ಯಾವಾಗ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಸಿ. ಎಂ. ಉದಾಸಿ : ಈಗಾಗಲೇ ಅದರಲ್ಲಿ ಸುಮಾರು 3.95 ಕಿ.ಮೀ. overlap ಆಗುತ್ತಿದೆ ಎನ್ನುವುದೂ ಗಮನಕ್ಕೆ ಬಂದಿದೆ. 144 ರಿಂದ 203ರವರೆಗೆ ಅಂದರೆ 59 ಕಿ.ಮೀ. ಉದ್ದ ರಸ್ತೆಯನ್ನು ಈಗಾಗಲೇ K-SHIP ಪತಿಯಿಂದ 7ಮೀ. ಅಗಲಕ್ಕೆ ವಿಸ್ತರಿಸಲಾಗಿದೆ. ಇನ್ನು, ಬಾಕಿ ಉಳಿದ ರಸ್ತೆಯನ್ನು ಸಹಿತ K-SHIP ನಲ್ಲಿ ಅಳವಡಿಸುವುದಕ್ಕೆ ಮುಂದಿನ ಯೋಜನೆಯಲ್ಲಿ ಗುರ್ತಿಸುವ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು : ಒಂದು ತಾಸು ಕಳೆದಿರುವುದರಿಂದ ಈಗ ಪ್ರಶ್ನೋತ್ತರದ ಅವಧಿ ಮುಗಿಯಿತು.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ನಾವು ಕೇಳಿರುವ ಪ್ರಶ್ನೆಗಳು ಉಳಿದಿವೆ.

ಅಧ್ಯಕ್ಷರು : ಅದಕ್ಕೇ ನಾನು ಮೊದಲಿನವರು ಸಹಕಾರ ಕೊಡಿ ಎಂದು ಹೇಳುತ್ತಿರುವುದು.

ಶ್ರೀ ಹೆಚ್. ಸಿ. ಬಾಲಕೃಷ್ಣ : ನಾವು ಕೇಳಿದ ಪ್ರಶ್ನೆಯನ್ನು ಕೊನೆಗೆ ಹಾಕಿ ಈಗ ತಾವು ಒಂದು ಗಂಟೆಯಾದ ತಕ್ಷಣ ಪೂರ್ಣಗೊಂಡಿತು ಎಂದರೆ, ನೀವು ಪ್ರಾರಂಭದಲ್ಲಿಯೇ ಕಡಿವಾಣ ಹಾಕಬೇಕಾಗಿತ್ತು. ದಯಮಾಡಿ, ನನ್ನ ಪ್ರಶ್ನೆಯೂ ಸೇರಿದಂತೆ ಎಲ್ಲವನ್ನೂ ಮುಗಿಸಿ.

ಅಧ್ಯಕ್ಷರು : ಬಾಲಕೃಷ್ಣರವರೆ, ಇವತ್ತು ಇದಾದಮೇಲೆ proceedingsಗೆ ರಚೆಯಿರುವುದರಿಂದ ಇವತ್ತಿನ ದಿವಸಕ್ಕೆ ವಿನಾಯಿತಿ ಕೊಡುತ್ತೇನೆ. ಮುಂದೆ ಬರುವ ದಿನಗಳಲ್ಲಿ ನಾನು ವಿನಾಯಿತಿ ಕೊಡುವುದಕ್ಕೆ ಸಾಧ್ಯವೇ ಇಲ್ಲ. (ಗೊಂದಲ) ಶಾಸಕರು ಯಾರು ಪ್ರಾರಂಭದಿಂದ ಪ್ರಶ್ನೆ ಕೇಳುತ್ತಾರೆ ಅವರೆಲ್ಲ ಸಹಕಾರ ಕೊಡಬೇಕು. ನೀವೇ ಅದನ್ನು control ಮಾಡಿಕೊಳ್ಳಬೇಕು. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳೋಣ.